## ಪ್ರಾರ್ಥನೆ

# ಕಲ್ಯಾಣವೃಷ್ಟಿಸ್ತವಃ - ೧

**ಕಲ್ಯಾಣವೃಷ್ಟಿಭಿರಿವಾಮೃತಪೂರಿತಾಭಿಃ**
**ಲಕ್ಷ್ಮೀಸ್ವಯಂವರಣ ಮಂಗಲದೀಪಿಕಾಭಿಃ ।**
**ಸೇವಾಭಿರಂಬ ತವ ಪಾದಸರೋಜಮೂಲೇ**
**ನಾಕಾರಿ ಕಿಂ ಮನಸಿ ಭಾಗ್ಯವತಾಂ ಜನಾನಾಮ್ ॥ ೧ ॥**

ಅಮ್ಮಾ, ಅಮೃತದಿಂದ ತುಂಬಿರುವ, ಮಂಗಳಕರವಾದ ಮಳೆಗೆ ಸಮಾನವಾದ, ಅಥವಾ ಲಕ್ಷ್ಮೀದೇವಿಯ ಸ್ವಯಂವರ ಕಾಲದಲ್ಲಿ ಬೆಳಗಿದ ಮಂಗಳ ದೀಪಮಾಲೆಗಳಿಗೆ ಸಮಾನವಾದ ಸೇವೆಯನ್ನು ನಿನ್ನ ಪಾದಪದ್ಮಗಳಲ್ಲಿ ಯಾವ ಮಹಾತ್ಮರು ಅರ್ಪಿಸುತ್ತಾರೋ ಅಂತಹ ಸೌಭಾಗ್ಯಶಾಲಿ ಸಜ್ಜನರ ಸೇವೆಗಳಿಂದ ಪ್ರಸನ್ನಳಾಗಿ, ನೀನು ಅವರಿಗೆ ಎಂತೆಂತಹ ಮಂಗಳಗಳನ್ನು ತಾನೇ ಅನುಗ್ರಹಿಸಲಿಲ್ಲ!

**ಏತಾವದೇವ ಜನನಿ ಸ್ಪೃಹಣೀಯಮಾಸ್ತೇ**
**ತ್ವದ್ವಂದನೇಷು ಸಲಿಲಸ್ಥಗಿತೇ ಚ ನೇತ್ರೇ ।**
**ಸಾನ್ನಿಧ್ಯಮುದ್ಯದರುಣಾಯುತಸೋದರಸ್ಯ**
**ತ್ವದ್ವಿಗ್ರಹಸ್ಯ ಪರಯಾ ಸುಧಯಾಪ್ಲುತಸ್ಯ ॥ ೨ ॥**

ಅಮ್ಮಾ, ನನಗೆ ನಿನ್ನ ಈ ಕೃಪಾನುಗ್ರಹವೇ ಸದಾಕಾಲ ಅಪೇಕ್ಷಿತವಾದದ್ದಾಗಿದೆ, ನಮಸ್ಕಾರಯೋಗ್ಯವಾಗಿದೆ. ನಿನ್ನನ್ನು ಪೂಜಿಸುತ್ತಾ ನನ್ನ ಕಂಗಳು ಪ್ರೇಮಾಶ್ರುಗಳಿಂದ ತುಂಬಿಕೊಳ್ಳುವುದು; ಅಂತೆಯೇ ಅಮೃತಕ್ಕೆ ಸಮಾನವಾಗಿ ನಿರ್ಮಲವಾದ, ಉದಯಿಸುತ್ತಿರುವ ಸಹಸ್ರ ಸೂರ್ಯಪ್ರಭೆಗೆ ಸಮಾನವಾದ ಪ್ರಭೆಯಿಂದ ಬೆಳಗುವ ನಿನ್ನ ದಿವ್ಯ ಮಂಗಳ ವಿಗ್ರಹದ ಸಾನ್ನಿಧ್ಯ ಇವು ನನಗೆ ಸಾಕು.

**ಈಶತ್ವನಾಮಕಲುಷಾಃ ಕತಿ ವಾ ನ ಸಂತಿ**
**ಬ್ರಹ್ಮಾದಯಃ ಪ್ರತಿಭವಂ ಪ್ರಲಯಾಭಿಭೂತಾಃ ।**



**ಏಕಃ ಸ ಏವ ಜನನಿ ಸ್ಥಿರಸಿದ್ಧಿರಾಸ್ತೇ**
**ಯಃ ಪಾದಯೋಸ್ತವ ಸಕೃತ್ಪ್ರಣತಿಂ ಕರೋತಿ ॥ ೩ ॥**

ಪ್ರತಿಯೊಂದು ಸೃಷ್ಟಿ, ಲಯಗಳ ಕಾಲದಲ್ಲಿ ಜನ್ಮ ತಳೆದು, ಸೃಷ್ಟಿಕರ್ತನೇ ಮೊದಲಾದ ಒಡೆತನವನ್ನು ಪಡೆದು, ಅಂತ್ಯವಿರುವ 'ಈಶ್ವರ' ಎಂಬ ಪದವಿಯನ್ನು ಎಷ್ಟು ಜನರು ಪಡೆದಿಲ್ಲ! ಆದರೆ ನಿನ್ನ ಪಾದಗಳಲ್ಲಿ ಒಮ್ಮೆಯಾದರೂ ನಮಸ್ಕರಿಸಿದವನಿಗೆ ಅನಂತ ಶಾಶ್ವತ ಸಿದ್ಧಿಯು ಪ್ರಾಪ್ತವಾಗುತ್ತದೆ.

— ಶ್ರೀಶಂಕರಾಚಾರ್ಯ

## ಸೂಕ್ತಿಪ್ರಭ

## ಹೃದಯ ಸೂಕ್ತಿಗಳು

ಹೃದಯಕ್ಕೆ ಮತ್ತು ಮಿದುಳಿಗೆ ಘರ್ಷಣೆಯಾದಾಗ ಹೃದಯವನ್ನು ಅನುಸರಿಸಿ. ಏಕೆಂದರೆ ಬುದ್ಧಿಗೆ ಇರುವುದು ಒಂದೇ ಸ್ಥಿತಿ, ಅದು ವಿಚಾರ. ಆ ಎಲ್ಲೆಯಲ್ಲಿ ಮಾತ್ರ ಬುದ್ಧಿ ಕೆಲಸ ಮಾಡಬಲ್ಲುದು. ಅದನ್ನು ಅದು ಅತಿಕ್ರಮಿಸಲಾರದು. ಹೃದಯ ಒಬ್ಬನನ್ನು ಅತ್ಯುನ್ನತ ಶಿಖರಕ್ಕ ಕರೆದೊಯ್ಯಬಲ್ಲುದು.

— ಸ್ವಾಮಿ ವಿವೇಕಾನಂದ

ಹೃದಯಕ್ಕೆ ಶಿಕ್ಷಣ ನೀಡದೆ ಮನಸ್ಸಿಗೆ ನೀಡುವ ಶಿಕ್ಷಣವು ನಿಜವಾದ ಶಿಕ್ಷಣ ಅಲ್ಲವೇ ಅಲ್ಲ. — ಅರಿಸ್ಟಾಟಲ್

ವಿದಾಯ ಹೇಳುವುದು ಕಣ್ಣಿನಿಂದ ಪ್ರೀತಿಸುವ ಜನರಿಗೆ ಮಾತ್ರ. ಹೃದಯದಿಂದಲೂ ಆತ್ಮದಿಂದಲೂ ಪ್ರೀತಿಸುವವರಿಗೆ ವಿದಾಯವೆಂಬುದೇ ಇಲ್ಲ. — ರೂಮಿ

ಜಗತ್ತಿನ ಅತ್ಯುತ್ತಮ ವಸ್ತುಗಳನ್ನು ನೋಡಲಾಗದು, ಮುಟ್ಟಲಾಗದು. ಅವುಗಳನ್ನು ಹೃದಯದಿಂದ ಭಾವಿಸಬೇಕು. — ಹೆಲೆನ್ ಕೆಲರ್

ಮಳೆಯು ಯೋಗ್ಯರು ಹಾಗೂ ಅಯೋಗ್ಯರು ಎಂದು ನೋಡದೆ ಎಲ್ಲರ ಮೇಲೂ ಸಮಾನವಾಗಿ ಸುರಿಯುವಂತೆ, ನಿನ್ನ ಹೃದಯ ಎಲ್ಲರೆಡೆಗೂ ಕರುಣೆ ತೋರಲಿ. — ಬುದ್ಧ